# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103
ದೂರವಾಣಿ : 0816-2254548, 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ:ತುವಿ:ಊ.ದ.ಆ:ಖ.ಕೋ:2020-21/3765 ದಿನಾಂಕ:16.02.2021

## ದರಪಟ್ಟಿ ಆಹ್ವಾನ (ವಿ.ವಿ.ವೆಬ್‌ಸೈಟ್)

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ 14ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಊಟವನ್ನು ಸರಬರಾಜು ಪಡೆಯಲು ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಅಧ್ಯಕ್ಷರು/ಸಂಚಾಲಕರು, ಊಟದ ಸಮಿತಿ, 14ನೇ ವಾರ್ಷಿಕ ಘಟಿಕೋತ್ಸವ, ತು.ವಿ.ತು ಇವರ ಪತ್ರ ದಿನಾಂಕ: 09.02.2021

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:16.02.2021 (ಕಂಡಿಕೆ-05).

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021 ಮಾರ್ಚ್ ಮಾಹೆಯಲ್ಲಿ ಆಯೋಜಿಸಲಾಗಿರುವ ತುಮಕೂರು ವಿಶ್ವವಿದ್ಯಾನಿಲಯದ 14ನೇ ಘಟಿಕೋತ್ಸವ ಸಮಾರಂಭಕ್ಕೆ ಊಟವನ್ನು ಸರಬರಾಜು ಪಡೆಯಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ವಿವರ | ಅಂದಾಜು ಪ್ರಮಾಣ | ದರ ರೂ. ಪ್ರತಿ ಒಂದು ಊಟಕ್ಕೆ (ಎಲ್ಲಾ ತೆರಿಗೆ ಸೇರಿದಂತೆ) |
|---|---|---|---|
| 1 | ಘಟಿಕೋತ್ಸವ ದಿನ ಮಧ್ಯಾಹ್ನ 01.00 ಗಂಟೆಗೆ ಊಟ ಅತಿ ಗಣ್ಯರು( ಮದನ ಮೋಹನ ಮಾಳವೀಯ ಅತಿಥಿ ಗೃಹ) 02 ರೀತಿ ಪಲ್ಯ ( ಹುರುಳಿ ಕಾಯಿ ಪಲ್ಯ, ಅವರೆ ಕಾಳು ಹುಸ್ಲಿ), ಪೂರಿ/ಚಪಾತಿ + ಸಾಗು, ವೆಜ್ ಪಲಾವ್ + ಚಟ್ನಿ, ಸ್ವೀಟ್ ಜಿಲೇಬಿ, ರೈಸ್, ರಸಂ, ಮೊಸರು, ಬೀಡ, ಬಾಳೆಹಣ್ಣು | 150 | |
| 2 | ಘಟಿಕೋತ್ಸವ ದಿನ ಮಧ್ಯಾಹ್ನ 01.00 ಗಂಟೆಗೆ ಊಟ ಗಣ್ಯರಿಗೆ (ಸಿಬ್ಬಂದಿ ಅತಿಥಿ ಗೃಹ) 02 ರೀತಿ ಪಲ್ಯ ( ಹುರುಳಿ ಕಾಯಿ ಪಲ್ಯ, ಅವರೆ ಕಾಳು ಹುಸ್ಲಿ), ಪೂರಿ/ಚಪಾತಿ + ಸಾಗು, ವೆಜ್ ಪಲಾವ್ + ಚಟ್ನಿ, ಸ್ವೀಟ್ ಜಿಲೇಬಿ, ರೈಸ್, ರಸಂ, ಮೊಸರು, ಬೀಡ, ಬಾಳೆಹಣ್ಣು | 400 | |
| 3 | ಘಟಿಕೋತ್ಸವ ದಿನ ಮಧ್ಯಾಹ್ನ 01.00 ಗಂಟೆಗೆ ಊಟ ಎಲ್ಲಾ ಸಿಬ್ಬಂದಿಗಳಿಗೆ ( ಸಿಬ್ಬಂದಿ ಅತಿಥಿ ಗೃಹ) ವೆಜ್ ಪಲಾವ್ + ಚಟ್ನಿ, ಒಂದು ಪಲ್ಯ, ಒಂದು ಸ್ವೀಟ್, ರೈಸ್, ರಸಂ, ಮೊಸರು | 400 | |

### ಷರತ್ತು ಮತ್ತು ನಿಬಂಧನೆಗಳು:

1. ಮುಚ್ಚಿದ ಲಕೋಟೆಯ ಮೇಲೆ "14ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಊಟವನ್ನು ಸರಬರಾಜು ಮಾಡಲು ದರಪಟ್ಟಿ" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

(ಪು.ತಿ.ನೋ)

2. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572 103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗಿರುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 23.02.2021 ಪೂರ್ವಾಹ್ನ 11-00.
4. ದರಪಟ್ಟಿಯನ್ನು ದಿನಾಂಕ:23.02.2021 ರಂದು ಅಪರಾಹ್ನ 12-00ಕ್ಕೆ ತೆರೆಯಲಾಗುವುದು.
5. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
6. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.
7. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
8. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
9. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
10. ದರಪಟ್ಟಿಯು ರೂ. ಒಂದು ಲಕ್ಷ ಮಿತಿಗೊಳಪಟ್ಟಿರತಕ್ಕದ್ದು.
11. ದರಪಟ್ಟಿಯಲ್ಲಿ ನಮೂದಿಸಿರುವ ಊಟದ ಪ್ರಮಾಣವನ್ನು ಹೆಚ್ಚಿಸುವ, ಕಡಿಮೆಗೊಳಿಸುವ ಅಥವಾ ರದ್ದು ಪಡಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
12. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಅಧ್ಯಕ್ಷರು, ಊಟದ ಸಮಿತಿ, 14 ನೇ ವಾರ್ಷಿಕ ಘಟಿಕೋತ್ಸವ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ರಕ್ಷಣಾ ಪ್ರತಿ.